ಉದ್ಯೋಗ ಖಾತ್ರಿ ಯೋಜನೆ

292 (479) ಶ್ರೀ ರಾಜಶೇಖರ ಬಸವರಾಜ ಪಾಟೀಲ್ (ಹುಮ್ನಾಬಾದ್):– ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಹುಮಾನಾಬಾದ ತಾಲ್ಲೂಕಿನ ಯಾವ ಯಾವ ಗ್ರಾಮಗಳಿಗೆ ತೋಟಗಾರಿಕೆ ಇಲಾಖೆಯ ವತಿಯಿಂದ ಈ ಯೋಜನೆಯ ಲಾಭ ದೊರಕಿದೆ;

ಆ) ಹುಮಾನಬಾದ ತಾಲ್ಲೂಕಿನಲ್ಲಿ ತೋಟಗಾರಿಕೆ ಇಲಾಖೆಯಿಂದ ಉದ್ಯೋಗ ಖಾತ್ರಿ ಯೋಜನೆಯಡಿ ಕಬ್ಬು, ಬಾಳೆ, ನಿಂಬೆಹಣ್ಣು ಮತ್ತು ಇನ್ನಿತರ ರೈತರಿಗೆ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ;

ಇ) ಹುಮಾನಾಬಾದ ತಾಲ್ಲೂಕಿನಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಮಂಜೂರಾದ ಅನುದಾನ ಸಮಯಕ್ಕೆ ಸರಿಯಾಗಿ ಫಲಾನುಭವಿಗಳಿಗೆ ದೊರಕಿದೆಯೆ;

ಈ) ಹಾಗಿದ್ದಲ್ಲಿ ಹುಮಾನಾಬಾದ ತಾಲ್ಲೂಕಿಗೆ ತೋಟಗಾರಿಕೆ ಇಲಾಖೆಯಿಂದ ಬಿಡುಗಡೆಯಾದ ಹಣವೆಷ್ಟು; ಗ್ರಾಮವಾರು ಬಿಡುಗಡೆಯಾದ ಹಾಗೂ ಖರ್ಚಾದ ಅನುದಾನದ ವಿವರ ನೀಡುವುದು?

ಶ್ರೀ ಎಸ್.ಎ. ರವೀಂದ್ರನಾಥ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು):–

ಅ) 2011–12 ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಇದುವರೆವಿಗೂ ಹುಮನಾಬಾದ ತಾಲ್ಲೂಕಿನ ಬೆಮಳಖೇಡಾ, ಮೀನಕೇರಾ, ಕಂದಗೊಳ, ನಂದಗಾಂವ, ಚೀನಕೇರಾ, ಬಶಿರಾಪೂರ, ಚಾಂಗಲೇರಾ, ಬನ್ನಳ್ಳಿ, ಮುತ್ತಂಗಿ, ಸೋನಕೇರಾ ಮತ್ತು ಸಿತಾಳಗೇರಾ ಗ್ರಾಮಗಳು ತೋಟಗಾರಿಕೆ ಚಟುವಟಿಕೆಗಳಿಗೆ ಈ ಯೋಜನೆಯ ಲಾಭ ಪಡೆದಿವೆ.

ಆ) 2011–12 ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಇದುವರೆವಿಗೂ ತೋಟಗಾರಿಕೆ ಕಾಮಗಾರಿಗಳಿಗೆ ಹುಮನಾಬಾದ ತಾಲ್ಲೂಕಿನ ಒಟ್ಟು 22 ರೈತ ಫಲಾನುಭವಿಗಳಿಗೆ ರೂ. 22.89 ಲಕ್ಷಗಳ ಅನುದಾನ ಗ್ರಾಮ ಪಂಚಾಯತ್ ವತಿಯಿಂದ ಮಂಜೂರಾಗಿರುತ್ತದೆ.

ಇ) ಹೌದು.

ಈ) ಹುಮನಾಬಾದ ತಾಲ್ಲೂಕಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ 2011–12ನೇ ಸಾಲಿನಲ್ಲಿ ಇದುವರೆವಿಗೂ ತೋಟಗಾರಿಕೆ ಚಟುವಟಿಕೆಗಳಿಗೆ ಗ್ರಾಮಪಂಚಾಯತ್ ವತಿಯಿಂದ ಮಂಜೂರಾದ ಒಟ್ಟು ಅನುದಾನ 22.89 ಲಕ್ಷಗಳು ಹಾಗೂ ಖರ್ಚಾದ ಅನುದಾನ ರೂ. 21.31 ಲಕ್ಷಗಳು.

ವಿವರ ಈ ಕೆಳಕಂಡಂತಿದೆ.

ರೂ. ಲಕ್ಷಗಳಲ್ಲಿ

ಕ್ರ.ಸಂ.	ಗ್ರಾಮ	ಮಂಜೂರಾದ ಅನುದಾನ	ಖರ್ಚಾದ ಅನುದಾನ
1	ಬೇಮಳಖೇಡಾ	6.18	5.38
2	ಮೀನಕೇರಾ	0.87	0.76
3	ಕಂದಗೂಳ	1.30	1.25
4	ನಂದಗಾಂವ	1.50	1.25
5	ಚೀನಕೇರಾ	1.30	1.28
6	ಬಶಿರಾಪೂರ	2.75	2.69
7	ಚಾಂಗಲೇರಾ	0.87	0.75
8	ಬನ್ನಳ್ಳಿ	3.87	3.71
9	ಮುತ್ತಂಗಿ	1.74	1.64
10	ಸೋನಕೇರಾ	1.50	1.42
11	ಸೀತಾಳಗೇರಾ	1.00	0.98
	ಒಟ್ಟು	22.89	21.31

ಮೀನುಗಾರರಿಗೆ ಆಶ್ರಯ ಮನೆ & ಮೀನುಗಾರರಿಗೆ ಬಲೆ ಒದಗಿಸುವುದು

293 (480) ಶ್ರೀ ರಾಜಶೇಖರ ಬಸವರಾಜ ಪಾಟೀಲ್ (ಹುಮ್ನಾಬಾದ್) :– ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–